ವಿದ್ಯಾರ್ಥಿಪ್ರಭ

ವಿದ್ಯಾರ್ಥಿಗಳಿಗಾಗಿ ಪ್ರತಿಜ್ಞೆಗಳು

ಸ್ವಾಮಿ ನಿರ್ವೇದಾನಂದ

ಅನುವಾದ ಮತ್ತು ವ್ಯಾಖ್ಯಾನ:
ಸ್ವಾಮಿ ಕರುಣಾಕರಾನಂದ

ಎರಡನೆಯ ಪ್ರತಿಜ್ಞೆ:

'ಛಾತ್ರಾಣಾಮ್ ಅಧ್ಯಯನಂ ತಪಃ' ಇತಿ ಸ್ಮೃತಿವಾಕ್ಯಂ ಅವಧಾರ್ಯ ಪ್ರತಿಭಾ–ವಿಕಾಸಾರ್ಥಂ ಆಚಾರನಿರತೋ ಅಧ್ಯಯನಪರೋ ಭವಿತುಮ್ ಅಹಮ್ ಯಥಾಸಾಧ್ಯಂ ಯತಿಷ್ಯೇ ।

'ವಿದ್ಯಾರ್ಥಿಗಳಿಗೆ ಅಧ್ಯಯನವೇ ತಪಸ್ಸು' ಎಂಬ ಸ್ಮೃತಿವಾಕ್ಯವನ್ನು ಮನದಲ್ಲಿ ಇಟ್ಟುಕೊಂಡು, ನನ್ನಲ್ಲಿರುವ ಪ್ರತಿಭೆಯ ವಿಕಾಸಕ್ಕಾಗಿ ಸದಾಚಾರದಿಂದ ನಡೆದುಕೊಳ್ಳುತ್ತ, ಅಧ್ಯಯನದಲ್ಲಿ ತೊಡಗಲು ನಾನು ಸಾಧ್ಯವಾದಷ್ಟು ಪ್ರಯತ್ನಿಸುತ್ತೇನೆ.

ನಿಜವಾದ ವಿದ್ಯಾರ್ಥಿ ಜ್ಞಾನವನ್ನು ಗಳಿಸಿಕೊಳ್ಳಲು ಅಧ್ಯಯನದಲ್ಲಿ ನಿರತನಾಗುತ್ತಾನೆಯೇ ಹೊರತು, ಕೇವಲ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ನೌಕರಿ ಗಳಿಸಿಕೊಳ್ಳಲು ಅಲ್ಲ. ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಿ, ಎಲ್ಲ ಆಯಾಮಗಳಿಂದ ವಿಶ್ಲೇಷಣೆ ಮಾಡಿ, ಬುದ್ಧಿಯಿಂದ ಚಿಂತಿಸಿ, ಹಾಲಿನಿಂದ ಬೆಣ್ಣೆಯನ್ನು ಹೊರಕ್ಕೆ ತೆಗೆಯುವಂತೆ ಜ್ಞಾನವೆಂಬ ನವನೀತವನ್ನು ಹೊರತೆಗೆಯುವವನೇ ನಿಜವಾದ ವಿದ್ಯಾರ್ಥಿ.

ಪ್ರಣಾಮ:

ಮೇಧಾಂ ಮೇ ಇಂದ್ರೋ ದಧಾತು। ಮೇಧಾಂ ದೇವೀ ಸರಸ್ವತೀ। ಮೇಧಾಂ ಮೇ ಅಶ್ವಿನಾವುಭಾವಾಧತ್ತಾಂ ಪುಷ್ಕರಸ್ರಜಾ ॥ ನಿಃಶೇಷ–ತಮೋಘ್ನಾಯ ನಿಖಿಲ–ವಿದ್ಯಾಮೂರ್ತಯೇ ಸರ್ವಸಿದ್ಧಿ–ಪ್ರದಾತ್ರೇ ನಮಃ ಪರಮಾತ್ಮನೇ ಸ್ವಾಹಾ ।

ಇಂದ್ರರೂಪಿಯಾದ ಭಗವಂತನು ನನಗೆ ಮೇಧಾಶಕ್ತಿಯನ್ನು ನೀಡಲಿ. ಸರಸ್ವತೀ ದೇವಿಯು ನನಗೆ ಮೇಧಾಶಕ್ತಿಯನ್ನು ನೀಡಲಿ. ಕಮಲ ಪುಷ್ಪಗಳ ಮಾಲೆಯನ್ನು ಧರಿಸಿರುವ ಅಶ್ವಿನೀ ದೇವತೆಗಳು ನನಗೆ ಮೇಧಾಶಕ್ತಿಯನ್ನು ನೀಡಲಿ. ಎಲ್ಲ ಬಗೆಯ ತಮಸ್ಸು(ಅಜ್ಞಾನ)ಗಳ ನಿವಾರಣೆಗಾಗಿ, ಸಕಲ ವಿದ್ಯೆಗಳ ಮೂರ್ತಿಯಾದ, ಎಲ್ಲ ಬಗೆಯ ಸಿದ್ಧಿಗಳನ್ನು ನೀಡುವ ಪರಮಾತ್ಮನಿಗೆ ನಮಸ್ಕಾರ. ಅವನಿಗೆ ಈ ಹವಿಸ್ಸನ್ನು ಅರ್ಪಿಸುತ್ತಿದ್ದೇನೆ.

ಮೂರನೇ ಪ್ರತಿಜ್ಞೆ:

'ಸತ್ಯಮೇವ ಜಯತೇ ನಾನೃತಂ, ಸತ್ಯೇನ ಪಂಥಾ ವಿತತೋ ದೇವಯಾನಃ' ಇತಿ ಶ್ರುತಿವಾಕ್ಯಮ್ ಅವಧಾರ್ಯ ಕಾಯೇನ ಮನಸಾ ವಾಚಾ ಸತ್ಯಪರಾಯಣೋ ಭವಿತುಮ್ ಅಹಮ್ ಯಥಾ ಸಾಧ್ಯಂ ಯತಿಷ್ಯೇ ।

'ಸತ್ಯವೇ ಜಯಿಸುವುದು, ಸುಳ್ಳಲ್ಲ. ಭಗವಂತನ ಕಡೆಗೆ ಹೋಗುವ ದಾರಿಯು ಸತ್ಯದಿಂದ ಕೂಡಿದೆ' ಎಂಬ ಶ್ರುತಿವಾಕ್ಯವನ್ನು ಯಾವಾಗಲೂ ಮನದಲ್ಲಿ ಇಟ್ಟುಕೊಂಡು, ದೇಹ, ಮನಸ್ಸು ಹಾಗೂ ಮಾತುಗಳಿಂದ ಸತ್ಯವನ್ನೇ ಆಚರಿಸಲು ನಾನು ಸಾಧ್ಯವಾದಷ್ಟು ಪ್ರಯತ್ನಿಸುತ್ತೇನೆ.

ಪ್ರಣಾಮ

ಅಸತೋ ಮಾ ಸದ್ಗಮಯ। ತಮಸೋ ಮಾ ಜ್ಯೋತಿರ್ಗಮಯ। ಮೃತ್ಯೋರ್ಮಾ ಅಮೃತಂ ಗಮಯ। ಸತ್ಯಾತ್ಮಕಾಮಾಯ ಸತ್ಯಧರ್ಮಾಶ್ರಯಾಯ ನಿಖಿಲ–ಅನೃತಮರ್ದಿನೇ ನಮಃ ಪರಮಾತ್ಮನೇ ಸ್ವಾಹಾ।

ಅಸತ್ಯದಿಂದ ನನ್ನನ್ನು ಸತ್ಯದ ಕಡೆಗೆ ಕರೆದುಕೊಂಡು ಹೋಗು. ತಮಸ್ಸಿನಿಂದ (ಅಜ್ಞಾನದಿಂದ) ನನ್ನನ್ನು ಬೆಳಕಿನೆಡೆಗೆ (ಜ್ಞಾನ) ಕರೆದುಕೊಂಡು ಹೋಗು. ಮೃತ್ಯುವಿನಿಂದ ಅಮೃತತ್ವದೆಡೆಗೆ ನನ್ನನ್ನು ಕರೆದುಕೊಂಡು ಹೋಗು.

ಸತ್ಯಾತ್ಮನಾಗಿರುವ ಬಯಕೆಯುಳ್ಳವನಿಗೆ, ಸತ್ಯ ಹಾಗೂ ಧರ್ಮಗಳು ಯಾರನ್ನು ಆಶ್ರಯಿಸಿವೆಯೋ ಅವನಿಗೆ (ಅಥವಾ ಯಾರು ಸತ್ಯ ಹಾಗೂ ಧರ್ಮವನ್ನು ಆಶ್ರಯಿಸಿಕೊಂಡಿದ್ದಾನೋ ಅಂತಹ ಭಗವಂತನಿಗೆ; ಸತ್ಯ ಹಾಗೂ ಧರ್ಮ ಮಾರ್ಗಾವಲಂಬಿಗಳಿಗೆ ಮಾತ್ರ ಭಗವಂತನು ಲಭ್ಯನಾದ್ದರಿಂದ ಅವನು ಸತ್ಯಧರ್ಮಾಶ್ರಯನು), ಎಲ್ಲ ಬಗೆಯ ಅಸತ್ಯಗಳನ್ನು ನಾಶ ಮಾಡುವವನಾದ ಆ ಪರಮಾತ್ಮನಿಗೆ ನಮಸ್ಕಾರ. ಅವನಿಗೆ ಈ ಹವಿಸ್ಸನ್ನು ಅರ್ಪಿಸುತ್ತಿದ್ದೇನೆ.

ನಾಲ್ಕನೇ ಪ್ರತಿಜ್ಞೆ:

'ಸ್ವಾರ್ಥೋ ಯಸ್ಯ ಪರಾರ್ಥ ಏವ ಸ ಪುಮಾನೇಕಃ ಸತಾಮ್ ಅಗ್ರಣೀಃ' ಇತಿ ಮನೀಷಿವಾಕ್ಯಮ್ ಅವಧಾರ್ಯ ನೀಚತಾ–ಕ್ರೂರತಾ–ದಾಂಭಿಕತಾ–ಆದಿ–ಮಲಿನ–ಸ್ವಾರ್ಥ–ಸಂತತೀ ವಿಹಾಯ ಉದಾರಚೇತಾ ವಿನಯೀ ಶ್ರದ್ಧಾವಾನ್ ದೇಶಭಕ್ತೋ ನರನಾರಾಯಣ–ಸೇವಾನಿಷ್ಠೋ ಭವಿತುಮಹಂ ಯಥಾಸಾಧ್ಯಂ ಯತಿಷ್ಯೇ।

ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾ ಚಾಪ್ಯವಧಾರ್ಯತಾಮ್। ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್॥

ಮಾತೃದೇವೋ ಭವ। ಪಿತೃದೇವೋ ಭವ। ಆಚಾರ್ಯದೇವೋ ಭವ। ಅತಿಥಿದೇವೋ ಭವ। ಯಾನಿ ಅನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ। ನೋ ಇತರಾಣಿ।

'ಯಾವನು ಪರರಿಗಾಗಿ ದುಡಿಯುವುದೇ ತಮ್ಮ ಸ್ವಂತ ಕಾರ್ಯವೆಂದು ಪರಗಣಿಸುತ್ತಾನೋ ಅಂತಹವನು ಸಾಧುಗಳಲ್ಲಿ ಅಗ್ರಗಣ್ಯನು' ಎಂದು ಸಜ್ಜನರು ಹೇಳುತ್ತಾರೆ. ಅವರ ಮಾತನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ನೀಚತನ, ಕ್ರೌರ್ಯ, ಮೋಸಗಳೇ ಮೊದಲಾದ ಸ್ವಾರ್ಥಗುಣಗಳನ್ನು ತ್ಯಜಿಸಿ, ಉದಾರಹೃದಯನೂ, ವಿನಯಶೀಲನೂ, ಶ್ರದ್ಧಾವಂತನೂ, ದೇಶಭಕ್ತನೂ ಆಗಿ ಮಾನವರ ರೂಪದಲ್ಲಿರುವ ಭಗವಂತನ ಸೇವೆಯಲ್ಲಿ ತೊಡಗಿಸಿಕೊಳ್ಳಲು ನಾನು ಯಥಾಸಾಧ್ಯ ಪ್ರಯತ್ನಿಸುತ್ತೇನೆ.'

ಧರ್ಮಶಾಸ್ತ್ರಗಳಲ್ಲಿ ನಾವು ಮಾಡಬೇಕಾಗಿರುವ ಕರ್ತವ್ಯದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಬಲ್ಲವರಿಂದ ಕೇಳಬೇಕು; ಕೇಳಿದ್ದನ್ನು ಮನಸ್ಸಿನಲ್ಲಿಡಬೇಕು. ತನಗೆ ಸರಿಯಲ್ಲ ಅನಿಸಿದ್ದನ್ನು ಇತರರಿಗೆ ಮಾಡ ಕೂಡದು. ತಾಯಿಯು ನಿನಗೆ ದೇವರಾಗಲಿ; ತಂದೆಯು ನಿನಗೆ ದೇವರಾಗಲಿ; ಗುರುಗಳು ನಿನಗೆ ದೇವರಾಗಲಿ; ಅತಿಥಿಗಳು ನಿನಗೆ ದೇವರಾಗಲಿ. ಯಾವುದು ಒಳ್ಳೆಯ ಕಾರ್ಯಗಳೋ ಅವುಗಳನ್ನು ಮಾಡಲೇಬೇಕು. ಅದನ್ನುಳಿದು ಬೇರೆ ಯಾವ ಕರ್ಮಗಳನ್ನೂ (ಕೆಡುಕಿನ ಕರ್ಮಗಳನ್ನು) ಮಾಡಬಾರದು.

ನಮ್ಮ ವ್ಯಕ್ತಿತ್ವವನ್ನು ಸುಂದರಗೊಳಿಸುವ ಎಲ್ಲ ಗುಣಗಳನ್ನೂ ಇಲ್ಲಿ ಹೇಳಲಾಗಿದೆ.

ಪ್ರಣಾಮ:

ಚಿತ್ತಕಲುಷ–ಹರಾಯ ಕರುಣಾಘನಮೂರ್ತಯೇ ಪ್ರೇಮ ಮಾಧುರ್ಯದಾಯಿನೇ ನಮಃ ಪರಮಾತ್ಮನೇ ಸ್ವಾಹಾ।

ಮನದ ಕಶ್ಮಲವನ್ನು ಹೋಗಲಾಡಿಸುವ, ಕರುಣೆಯೇ ಮೂರ್ತಿಯಾಗಿರುವ ಮತ್ತು ಪ್ರೇಮಮಾಧುರ್ಯವನ್ನು ನೀಡುವವನಾದ ಪರಮಾತ್ಮನಿಗೆ ನಮಸ್ಕರಿಸಿ, ಈ ಹವಿಸ್ಸನ್ನು ಅವನಿಗೆ ಅರ್ಪಿಸುತ್ತಿದ್ದೇನೆ.

ಐದನೆಯ ಪ್ರತಿಜ್ಞೆ:

ಸುಪರಿಚಾಲಿತಾ ಸಂಹತಿಶಕ್ತಿರೇವ ಸಮಾಜ–ಕಲ್ಯಾಣ–ನಿಧಾನಮ್। ಅತಃ ಐಕ್ಯ ಪ್ರತಿಷ್ಠಾಮೂಲಕಂ ಸಂಹತಿಶಕ್ತಿ–ಜಾಗರಣಾತ್ಮಕಂ 'ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಮ್' ಇತಿ ಪ್ರತ್ಯಾದೇಶಮ್–ಅವಧಾರ್ಯ ಸದುಪಾಯಪರಃ ಸನ್ನಹಮ್ ಏತತ್–ವಿದ್ಯಾಪ್ರತಿಷ್ಠಾನ ಗೋಷ್ಠೀ–ಭುಕ್ತೈಃ ಸರ್ವೈಃ ಐಕ್ಯಬದ್ಧೋ ಭವಿತುಂ ಯಥಾಸಾಧ್ಯಂ ಯತಿಷ್ಯೇ।

ಸರಿಯಾಗಿ ಕಾರ್ಯ ನಿರ್ವಹಿಸಲು ಸಹಾಯಕವಾಗುವ ಸಂಘಟನೆಯ ಶಕ್ತಿಯೇ ಸಮಾಜಕಲ್ಯಾಣಕ್ಕೆ ಸಾಧನ. ಆದ್ದರಿಂದ ಸಂಘಟನಾ ಶಕ್ತಿಯನ್ನು ಜಾಗೃತಗೊಳಿಸುವಂತಹ, 'ನೀವು ಒಟ್ಟಿಗೆ ಹೋಗುವವರಾಗಿ, ಒಂದನ್ನೇ ನುಡಿಯುವವರಾಗಿ, (ನಿಮ್ಮ) ಮನಸ್ಸುಗಳೂ ಒಂದಾಗಿರಲಿ' ಎಂಬ ವೇದವಾಕ್ಯವನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತೇನೆ. ಅದಕ್ಕಾಗಿ ದುಡಿಯುತ್ತ, ನಾನು ಈ ವಿದ್ಯಾಸಂಸ್ಥೆಯಲ್ಲಿರುವ ಎಲ್ಲರೊಂದಿಗೂ ಒಮ್ಮತದಿಂದ ಇರಲು, ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ.

ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ ನಮ್ಮಲ್ಲಿ ಸಂಘಟನಾ ಶಕ್ತಿ ಇಲ್ಲದ್ದರಿಂದಲೇ ಭಾರತವು ಗುಲಾಮ ದೇಶವಾಯಿತು ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಸಮಾಜದ ಸಂಘಟನೆ ನಮ್ಮೆಲ್ಲರ ಜವಾಬ್ದಾರಿ. ನಮ್ಮೊಳಗೆ ಎಷ್ಟೇ ಭಿನ್ನಾಭಿಪ್ರಾಯಗಳಿರಬಹುದು, ಆದರೆ ನಾವು ಇರುವ ಸಂಸ್ಥೆಯನ್ನು, ಸಮಾಜವನ್ನು, ದೇಶವನ್ನು ಒಡೆಯುವ ಕೆಲಸವನ್ನು ನಾವು ಎಂದಿಗೂ ಮಾಡಬಾರದು.

ಪ್ರಣಾಮ:

ವಿಶ್ವರೂಪಾತ್ಮಕಾಯ ಅಖಿಂಡ–ಐಕತತ್ವಾಯ ಸರ್ವಲೋಕಾ – ಶ್ರಯಾಯ ನಮಃ ಪರಮಾತ್ಮನೇ ಸ್ವಾಹಾ।

ಎಲ್ಲ ರೂಪಗಳಿಂದ ಕೂಡಿರುವವನೂ, (ಆದರೂ) ಅಖಿಂಡೈಕ ರೂಪನೂ, ಎಲ್ಲ ಲೋಕಗಳಿಗೆ ತಾನೊಬ್ಬನೇ ಆಶ್ರಯನಾಗಿರುವವನೂ ಆಗಿರುವ ಪರಮಾತ್ಮನಿಗೆ ನಮಸ್ಕರಿಸಿ ಈ ಹವಿಸ್ಸನ್ನು ಅರ್ಪಿಸುತ್ತಿದ್ದೇನೆ.

ಕೊನೆಯ ಪ್ರಣಾಮ

ಸಂಕಲ್ಪೇಷು ಏಷು ಪರಮಾತ್ಮದೇವತಾ ಮೇ ಸಹಾಯೋ ಭವತು ಸ್ವಾಹಾ। ಶಂ ಮೇ ಶುಭಾಯ ಭವತು ಸ್ವಾಹಾ। ಭವತು ಶುಭಾಯ, ಭವತು ಶಿವಾಯ, ಭವತು ಕ್ಷೇಮಾಯ, ಪರಮಾತ್ಮದೇವತಾ ಸ್ವಾಹಾ। ಓಂ ವಿಶ್ವಾನಿ ದೇವ ಸವಿತರ್ದುರಿತಾನಿ ಪರಾಸುವ। ಯದ್ ಭದ್ರಂ ತನ್ನ ಆಸುವ ಸ್ವಾಹಾ॥

ಈ ಸಂಕಲ್ಪಗಳನ್ನು ಆಚರಣೆಗೆ ತರಲು ದೇವರು ನನಗೆ ಸಹಾಯ ಮಾಡಲಿ. ಅವನಿಗೆ ಈ ಹವಿಸ್ಸು ಅರ್ಪಣೆಯಾಗಲಿ. ನನಗೆ ಒಳ್ಳೆಯದಾಗಲಿ, ನಾನು ಅರ್ಪಿಸುವ ಈ ಹವಿಸ್ಸು ನನಗೆ ಶುಭವನ್ನುಂಟು ಮಾಡಲಿ, ಸ್ವಾಹಾ. ನಮ್ಮ ಒಳ್ಳೆಯದಕ್ಕಾಗಿ, ಮಂಗಳಕ್ಕಾಗಿ, ಕ್ಷೇಮಕ್ಕಾಗಿ ಈ ಹವಿಸ್ಸನ್ನು ಪರಮಾತ್ಮನಿಗೆ ಅರ್ಪಿಸುತ್ತೇನೆ. ಓಂ. ಜಗತ್ಪಿತನು ನಮ್ಮ ಎಲ್ಲ ತಪ್ಪುಗಳನ್ನೂ, ಪಾಪಗಳನ್ನೂ ಕಳೆಯಲಿ. ನನಗೆ ಒಳ್ಳೆಯದನ್ನೇ ಮಾಡಲಿ, ಸ್ವಾಹಾ.

ಪೂರ್ಣಾಹುತಿ

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ। ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಓಂ. ಅದು (ಪರಮಾತ್ಮನು) ಪೂರ್ಣವೇ. ಇದು(ಸೃಷ್ಟಿಯೂ, ಅದೇ ಪರಮಾತ್ಮನದ್ದಾದ್ದರಿಂದ) ಪೂರ್ಣವೇ. ಪೂರ್ಣದಿಂದಲೇ ಪೂರ್ಣವು ಉಂಟಾಗಿದೆ. ಪೂರ್ಣದಿಂದ ಪೂರ್ಣವನ್ನು ತೆಗೆದ ಮೇಲೆಯೂ ಪೂರ್ಣವೇ ಉಳಿದುಕೊಳ್ಳುತ್ತದೆ.

ಓದುವ ವಿಧಾನ : ಓದುವ ಸರಿಯಾದ ಬಗೆ

ಕಲ್ಪನಾ ಶಕ್ತಿಯು ನಿಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅತ್ಯಂತ ಸಹಾಯಕವಾದುದು. ನೀವು ಅರ್ಥ ಮಾಡಿಕೊಳ್ಳಬೇಕಾದ ವಿಷಯಗಳ ಕಾಲ್ಪನಿಕ ಚಿತ್ರವನ್ನು ನಿಮ್ಮ ಮನಸ್ಸಿನಲ್ಲಿ ಮೂಡಿಸಿಕೊಳ್ಳಿ. ಆಗ ನಿಮಗೆ ಕೇಳಲಾಗುವ ಯಾವುದೇ ಪ್ರಶ್ನೆಗೆ ಉತ್ತರ ಕೊಡಬಲ್ಲೆ ಎಂಬ ಭಾವನೆ ನಿಮಗೆ ಬರುವುದು. ಪರಿಪೂರ್ಣವಾದ ಆತ್ಮವಿಶ್ವಾಸವು ನಿಮ್ಮ ಮನಸ್ಸೆಂಬ ಯಂತ್ರವನ್ನು ಚುರುಕಾಗಿಟ್ಟಿರಲು ಅತ್ಯಂತ ಆವಶ್ಯಕ.

ಪುಸ್ತಕಗಳು ಜ್ಞಾನದ ಗಣಿಗಳು. ಆದರೆ, ಸ್ವಪ್ರಯತ್ನವಿಲ್ಲದೆ ಅವು ಆ ಜ್ಞಾನವನ್ನು ನಿಮಗೆ ತಂದುಕೊಡಲಾರವು. ಆದ್ದರಿಂದ ಅವುಗಳನ್ನು ಆಳವಾಗಿ ಅಧ್ಯಯನ ಮಾಡಬೇಕು. ಓದುವ ಸರಿಯಾದ ಬಗೆಯು ಪುಸ್ತಕದಷ್ಟೇ ಮಹತ್ವವಾದುದು. ತಾಂತ್ರಿಕ ಪುಸ್ತಕಗಳಲ್ಲಿ ಮುಖ್ಯಾಂಶಗಳನ್ನು ಗಮನಿಸುತ್ತ ಓದಬೇಕು; ಸಾಹಿತ್ಯ ಮತ್ತು ತತ್ತ್ವಶಾಸ್ತ್ರದ ಪುಸ್ತಕಗಳಲ್ಲಿ ಬರಹದ ಹಿಂದಿನ ಉದ್ದೇಶವನ್ನು ಗಮನಿಸುತ್ತ ಓದಬೇಕು. ಪರಿಶ್ರಮ ಪಡದಿದ್ದರೆ, ಅತ್ಯಮೂಲ್ಯವಾದ ಪುಸ್ತಕಗಳೂ ಕೂಡ ಮಂಗನಿಗೆ ಕೊಟ್ಟ ಮಾಣಿಕ್ಯದಂತೆ ವ್ಯರ್ಥವಾಗುತ್ತವೆ.

ನಾವು ಸಿಕ್ಕದ್ದನ್ನೆಲ್ಲಾ ಓದುವ, ಕಂಡದ್ದನ್ನೆಲ್ಲಾ ನೋಡುವ, ಕೇಳುವ ಕೆಟ್ಟ ಅಭ್ಯಾಸವನ್ನು ಬಿಟ್ಟುಬಿಡಬೇಕು. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ಯೋಚಿಸದೆ ಓದುವುದು ನಿರರ್ಥಕ. ಆದ್ದರಿಂದ ಹೆಚ್ಚು ಓದುವ ಮೊದಲು, ಅರ್ಥವತ್ತಾಗಿರುವುದನ್ನು, ನಮ್ಮ ಜೀವನಕ್ಕೆ ಉಪಯೋಗಕ್ಕೆ ಬರುವ ವಿಷಯಗಳನ್ನು ಅಧ್ಯಯನ ಮಾಡುವುದು ಒಳ್ಳೆಯದು.